

# ಪ್ರಕೃತಿಯ ವಿಸ್ಮಯ ವಿನೂತನ ಹಣ್ಣು

# ಬುದ್ಧನ ಕೈ

**ಬೌದ್ಧರಿಗೆ ಈ ಹಣ್ಣು ಧ್ಯಾನಾಸೀನ ಬುದ್ಧನ ಕೈನಂತೆ ಕಾಣಿಸಿದ್ದರಿಂದ ಅದು 'ಬುದ್ಧನ ಕೈ' ಎಂಬ ಹೆಸರು ಪಡೆದಿದೆ. ಈಗ ಇದನ್ನು ವಿಶ್ವದ ಅನೇಕ ದೇಶಗಳಲ್ಲಿ ಬೆಳೆಸಲಾಗುತ್ತಿದೆ.**



■ **ಬೃಂದಾ ಎನ್. ರಾವ್**

ಇತ್ತೀಚೆಗೆ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಬೆಳಿಗ್ಗೆ ವಾಕ್ ಮಾಡುತ್ತಿದ್ದಾಗ, ಮನೆಯೊಂದರ ಮುಂದಿನ ಗಿಡದಲ್ಲಿ ಹಳದಿ ಬಣ್ಣದ ವಿಚಿತ್ರ ಆಕಾರದ ವಸ್ತುಗಳು ಸಿಕ್ಕಿಕೊಂಡು ನೇತಾಡುತ್ತಿದ್ದಂತೆ ಕಾಣಿಸಿತು. ದೃಷ್ಟಿಸಿ ನೋಡಿದರೆ, ಅವುಗಳು ಗಿಡದಲ್ಲೇ ಬಿಟ್ಟಿದ್ದೆಂದು ಕಂಡಿತು. ಆದರೆ ಅದು ಹೂವೋ ಹಣ್ಣೋ ಅರ್ಥ ಆಗಲಿಲ್ಲ. ಫೋಟೊ ತೆಗೆದು ಗೂಗಲ್ ಮಾಡಿದಾಗ, ಅದು 'ಬುದ್ಧನ ಕೈ' ಎಂಬ ಹಣ್ಣೆಂದು ತಿಳಿಸಿತು. ಬಹಳ ಕುತೂಹಲ ಉಂಟಾಗಿ ಅದರ ಬಗ್ಗೆ ಒಂದಿಷ್ಟು ಓದಿದೆ.

ಮಾದಲ ಜಾತಿಯ, ಅಂದರೆ ಕಿತ್ತಳೆ/ನಿಂಬೆ ಜಾತಿಗೆ ಸೇರಿದ ವಿನೂತನ, ಅಸಾಮಾನ್ಯ ಹಣ್ಣು ಇದು! ಈ ಹಣ್ಣಿಗೆ ದಪ್ಪನೆಯ ಸಿಪ್ಪೆ ಇದ್ದು, ತೊಟ್ಟಿನ ಬಳಿಯಿಂದ ಹೊರಡುವ ಬಿಡಿ ಭಾಗಗಳು ಮನುಷ್ಯನ ಕೈ ಬೆರಳುಗಳಂತೆ ನೇತಾಡುತ್ತವೆ. ಸಾವಿರಾರು ವರ್ಷಗಳ ಹಿಂದೆ ಮಾದಲ ಜಾತಿಯ ಹಣ್ಣೊಂದು ತಾನಾಗಿಯೇ ರೂಪಾಂತರಗೊಂಡು (Mutation) ಈ ಹಣ್ಣು ವಿಕಸಿತವಾಯಿತೆಂದೂ, ಅದರ ವಿಚಿತ್ರ ಆಕಾರ ಹಾಗೂ ಪರಿಮಳದಿಂದ ಆಕರ್ಷಿತನಾದ ಮಾನವ ಕಸಿ ಮಾಡಿ ಅದನ್ನು ಬೆಳೆಯಲು ಪ್ರಾರಂಭಿಸಿರಬೇಕು ಎಂದೂ ಹೇಳುತ್ತಾರೆ.

ಇದು ಮೂಲತಃ ಈಶಾನ್ಯ ಭಾರತದ ಅಸ್ಸಾಂ ಹಾಗೂ ಮಣಿಪುರದ್ದು. ಚೀನಾ ದೇಶದಿಂದ ಬೌದ್ಧರು ತೀರ್ಥಯಾತ್ರೆಗಾಗಿ ಬಂದವರು ಇದನ್ನು ತೆಗೆದುಕೊಂಡು ಹೋಗಿ ಅಲ್ಲಿ ಬೆಳೆಯಲಾರಂಭಿಸಿದರು ಎಂದು ಹೇಳುತ್ತಾರೆ. ಆ ಬೌದ್ಧರಿಗೆ ಈ ಹಣ್ಣು ಧ್ಯಾನಾಸೀನ ಬುದ್ಧನ ಕೈನಂತೆ ಕಾಣಿಸಿದ್ದರಿಂದ ಅದು 'ಬುದ್ಧನ ಕೈ' ಎಂಬ ಹೆಸರು ಪಡೆದಿದೆ. ಈಗ ಇದನ್ನು ವಿಶ್ವದ ಅನೇಕ ದೇಶಗಳಲ್ಲಿ ಬೆಳೆಸಲಾಗುತ್ತಿದೆ. ಇದು ಬೆಳೆಯಲು ಉಷ್ಣವಲಯ ಹಾಗೂ ಸಮಶೀತೋಷ್ಣವಲಯ ಸೂಕ್ತವಾದ ಹವಾಮಾನ. ನವೆಂಬರ್ ತಿಂಗಳಿಂದ ಜನವರಿ–ಫೆಬ್ರುವರಿ ತಿಂಗಳ ಅವಧಿಯಲ್ಲಿ ಗಿಡಗಳು ಫಲ ನೀಡುತ್ತವೆ.

ಈ ಹಣ್ಣು ಬೌದ್ಧ ಸಂಸ್ಕೃತಿಯಲ್ಲಿ ಬಹಳ ಪ್ರಾಮುಖ್ಯ ಪಡೆದಿದೆ. ಇನ್ನೂ ಕಾಯಿಯಾಗಿದ್ದಾಗ ಬೆರಳುಗಳು ತೆರೆದುಕೊಳ್ಳದೆ ಕೈ ಮುಗಿದಂತೆಯೇ ಕಾಣಿಸುವುದರಿಂದ, ಅದು ಮಂಗಳಕರವೆಂಬ ನಂಬಿಕೆ ಇದ್ದು, ಅದನ್ನು ಬೌದ್ಧ ದೇವಾಲಯಗಳಲ್ಲಿ ಬುದ್ಧನಿಗೆ ಅರ್ಪಿಸುವ ಪದ್ಧತಿ ಇದೆ. ಚೀನೀ ಮತ್ತಿತರ ಸಂಸ್ಕೃತಿಗಳಲ್ಲಿ ಈ ಹಣ್ಣು ಸಂತಸದ, ದೀರ್ಘಾಯಸ್ಸಿನ ಹಾಗೂ ಸಮೃದ್ಧಿಯ

